ಈ ಲೇಖನದ ವಿಷಯಾನುಕ್ರಮಣಿಕೆ


**ಅಪಮೃತ್ಯುವಿನ ಕುರಿತು ತಿಳಿಸಿ** 2

**ಸಹಜ ಸಾವು** 4

**ಅಸಹಜ ಸಾವು** 5

**ಅಪಮೃತ್ಯುವಿನ ಕುರಿತು ಗರುಡದೇವರ ಗಂಭೀರ ಪ್ರಶ್ನೆ** 9

**ಆಯುಷ್ಯನಾಶ ಮಾಡುವ ಕರ್ಮಗಳು** 15

**ಅಪಮೃತ್ಯುವಿಗೆ ದೃಷ್ಟಾಂತಗಳು** 17

**ಅಪಮೃತ್ಯುವಿನ ಪರಿಹಾರಕ್ಕಾಗಿ ಏಕೆ ಬೇಡಬೇಕು** 20

**ಅಪಮೃತ್ಯುವಿಗೆ ಒಳಗಾದವರ ಉದ್ಧಾರಕ್ಕೆ ನಾವೇನು ಮಾಡಬಹುದು** 24

**ಆಯುಷ್ಯವನ್ನು ವೃದ್ಧಿ ಮಾಡುವ ಕರ್ಮಗಳು** 28

# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 123

## ಅಪಮೃತ್ಯುವಿನ ಕುರಿತು ತಿಳಿಸಿ

ಪೂಜ್ಯ ಆಚಾರ್ಯರಲ್ಲಿ ವಿಜ್ಞಾಪನೆಗಳು.

1. ಅಪಮೃತ್ಯು ಎಂದರೇನು

2. ಸ್ವಾಮಿ ಜೀವಿಗೆ ಆಯುಷ್ಯವಿದ್ದೂ ಮುಂಚೆಯೇ ಅಪಮೃತ್ಯು ಕೊಡುತ್ತಾನಾ? ಜೀವಿ ಸಂಪೂರ್ಣ ಅಸ್ವತಂತ್ರನಾಗಿರುವದರಿಂದ ಆತ್ಮಹತ್ಯೆ ಅಥವಾ ಅಪಘಾತ ಇವುಗಳು ಸ್ವಾಮಿಯ ಸಂಕಲ್ಪದಂತೇ ನಡೆಯುತ್ತವೆ.

3. ಆಯುಷ್ಯವಿದ್ದೂ ಅಪಮೃತ್ಯು ಬರುವದೆಂದಾರೆ ಅಪಮೃತ್ಯು ಘಟಿಸಿದ ಕ್ಷಣದಿಂದ ಆಯುಷ್ಯವಿರುವತನಕ ಸ್ವಾಮಿಯು ತನ್ನ ಸಂಕಲ್ಪದಂತೆ ನಡೆಸಬೇಕೆಂದಿದ್ದ ಜೀವಿಯ ಕರ್ಮಗಳು ನಡೆಯುವದಿಲ್ಲವಲ್ಲ?

4. ಅಪಮೃತ್ಯು ಆಯುಷ್ಯ ಮುಗಿದಾಗ ಬರುತ್ತದೆ ಎಂದಾದರೆ ಅಪಮೃತ್ಯುವಿಗೂ ಮೃತ್ಯುವಿಗೂ ವ್ಯತ್ಯಾಸವೇನು?

5. ಅಪಮೃತ್ಯು ಪರಿಹರಿಸೋ ಅನಿಲದೇವ... ಕ್ಕೆ ಅರ್ಥವೇನು?

6. ಶ್ರೀ ವಾದಿರಾಜಗುರುಸಾರ್ವಭೌಮರು, ಶ್ರೀ ಬ್ರಹ್ಮಣ್ಯತೀರ್ಥರು, ಶ್ರೀ ರಾಘವೇಂದ್ರಸ್ವಾಮಿಗಳು, ಶ್ರೀ ವಿಜಯಪ್ರಭುಗಳು ಮುಂತಾದ ಮಹನೀಯರು ಪರಿಹಾರ ಮಾಡಿದ ಈ ಅಪಮೃತ್ಯುವಿನ ರಹಸ್ಯವೇನು?

ತಾವು ಕೃಪೆ ಮಾಡಿ ತಿಳಿಸಿಕೊಡಬೇಕೆಂದು ತಮ್ಮಲ್ಲಿ ವಿಜ್ಞಾಪನೆಗಳು.

— ಮುಕುಂದ್ ರಾವ್.

ತುಂಬ ಉತ್ತಮವಾದ ಪ್ರಶ್ನೆಗಳು. ಒಂದೊಂದಾಗಿ ಉತ್ತರ ಪಡೆಯುತ್ತ ಹೋಗೋಣ.

ಸಾವು ಮೂರು ರೀತಿ.

ಯಾವುದೇ ಖಾಯಿಲೆ-ತೊಂದರೆ ಇಲ್ಲದೆ ಉಂಟಾಗುವ ಸಾವು.

ರೋಗಗಳಿಂದ ಉಂಟಾಗುವ ಸಾವು.

ಅಪಘಾತಗಳಿಂದ ಉಂಟಾಗುವ ದುರ್ಮರಣ.

ಇದರಲ್ಲಿ ಮೊದಲ ಎರಡು ಸಾವನ್ನು ಇಂದಿನವರು ಸಹಜ ಸಾವು ಎನ್ನುತ್ತಾರೆ. ಮೂರನೆಯದನ್ನು ಅಸಹಜ ಸಾವು.

## ಸಹಜ ಸಾವು

ಮನುಷ್ಯನಿಗೆ ಯಾವುದೇ ಖಾಯಿಲೆಯಿಂದ, ಯಾವುದೇ ದೇಹದ, ಮನಸ್ಸಿನ ಸಮಸ್ಯೆಯಿಂದ, ಅಥವಾ ಇದ್ಯಾವುದೂ ಇಲ್ಲದೇ ಸಾವುಂಟಾದರೂ ಅದು ಸಹಜ ಸಾವು.

ಅಂದರೆ, ಹೃದಯಾಘಾತ, ದೇಹದ ಅವಯವಗಳು ನಿಷ್ಕ್ರಿಯವಾಗುವಿಕೆ, ಶ್ವಾಸೋಚ್ಛ್ವಾಸದ ತೊಂದರೆ ಮುಂತಾದವುಗಳಿಂದ ಉಂಟಾಗುವ ಸಾವು ಅಸಹಜ ಸಾವಲ್ಲ. ಸಹಜ ಸಾವು.

## ಅಸಹಜ ಸಾವು

ಯಾವುದೇ ಸಹಜ ದೈಹಿಕ ಖಾಯಿಲೆಯಿಂದ ಅಥವಾ ಸರಳವಾಗಿ ಉಂಟಾಗದ ಸಾವು ಅಸಹಜಸಾವು.

ನೀರಿನಲ್ಲಿ ಮುಳುಗಿ, ಬಿರುಗಾಳಿ, ಚಂಡಮಾರುತಕ್ಕೆ ಸಿಲುಕಿ, ಬಿಸಿಲಿನಲ್ಲಿ ನಲುಗಿ, ಬೆಂಕಿಯಿಂದ ಉಂಟಾಗುವ ಸಾವು

ಅಪಘಾತಗಳಿಂದ, ಅವಘಡಗಳಿಂದ ಉಂಟಾಗುವ ಸಾವು,

ಹಾವು ಮುಂತಾದವು ಕಚ್ಚುವದರಿಂದ, ಎತ್ತು ಮುಂತಾದವು ತಿವಿಯುವದರಿಂದ, ಹುಲಿ

ಮುಂತಾದವರು ಆಕ್ರಮಿಸುವದರಿಂದ, ಆನೆ ಮುಂತಾದವು ತುಳಿಯುವದರಿಂದ ಉಂಟಾಗುವ ಸಾವು,

ಯಾವುದೇ ರೀತಿಯ ಆಯುಧ, ಶಸ್ತ್ರ, ವಸ್ತುವಿನಿಂದ  ಉಂಟಾಗುವ ಸಾವು[1], ಕೊಲೆ, ಆತ್ಮಹತ್ಯೆಗಳಿಂದ ಉಂಟಾಗುವ ಸಾವು,

ಅಪಮೃತ್ಯು ಸಹಜ ಸಾವಾಗಿಯೂ ಬರಬಹುದು. ಅಸಹಜಸಾವಾಗಿಯೂ ಬರಬಹುದು.

ಅಪಮೃತ್ಯು ಎಂದರೆ ಅಪಕೃಷ್ಟವಾದ (ನಿಕೃಷ್ಟವಾದ) ಸಾವು ಎಂದರ್ಥ. ದುರ್ಮರಣ ಎನ್ನುವ ಶಬ್ದವೂ ಇದೇ ಅರ್ಥವನ್ನು ಹೇಳುತ್ತವೆ.

ಮಗು ಗರ್ಭಕ್ಕೆ ಸೇರುವಾಗಲೇ ಆ ಜೀವದ ಹಿಂದಿನ ಕರ್ಮಗಳ ಆಧಾರದ ಮೇಲೆ ಆಯುಷ್ಯ ನಿರ್ಧಾರವಾಗಿರುತ್ತದೆ. ಗರ್ಭದಿಂದ ಹೊರಬಂದು

---

[1] **ಯುದ್ಧದಲ್ಲಿ ಸೈನಿಕ ಸಾಯುವದು ಸರ್ವಥಾ ದುರ್ಮರಣವಲ್ಲ. ಧರ್ಮದ, ದೇಶದ, ಸಜ್ಜನರ ಉಳಿವಿಗಾಗಿ ಹೋರಾಡಿ ಸಾಯುವದು ಸಾವಿನಲ್ಲಿಯೇ ಶ್ರೇಷ್ಠವಾದ ಸಾವು. ಆ ಸಾವು ಮಹಾಪುಣ್ಯಪ್ರದ ಎಂದು ಶಾಸ್ತ್ರಗಳು ಸಾರುತ್ತವೆ. ಅಂತಹ ವೀರರಿಗಾಗಿಯೇ ವೀರಸ್ವರ್ಗವಿದೆ.**

ಒಂದು ಕ್ಷಣವಾಗಿರಬಹುದು, ಅಥವಾ ನೂರು ವರ್ಷವಾಗಬಹುದು.

ಎಷ್ಟು ಆಯುಷ್ಯ ಪಡೆದು ಹುಟ್ಟಿದೆಯೋ ಅಷ್ಟು ಸಮಯ ಪೂರ್ಣವಾಗಿ ಬದುಕಿದ್ದು ಸತ್ತರೆ ಅದು ಅಪಮೃತ್ಯುವಲ್ಲ.

ಅಂದರೆ ತಾಯಿಯ ಗರ್ಭದಿಂದ ಮಗು ಹುಟ್ಟಿದೆ, ಹುಟ್ಟಿದ ಹತ್ತು ನಿಮಿಷಕ್ಕೆ ಸತ್ತಿದೆ ಎಂದಿಟ್ಟುಕೊಳ್ಳಿ, ಅದು ಅಪಮೃತ್ಯುವಲ್ಲ. ಅದರ ಆಯುಷ್ಯ ಇದ್ದದ್ದೇ ಅಷ್ಟು.

ಅದೇ ಮಗು ಮೇಲಿನಿಂದ ಕೆಳಕ್ಕೆ ಬಿದ್ದೋ, ಅಥವಾ ಯಾವುದೋ ಶಸ್ತ್ರದಿಂದ, ಯಾವುದೇ ಪ್ರಾಣಿ ಪಕ್ಷಿಗಳಿಂದ, ಒಟ್ಟಾರೆ ಅಸಹಜವಾದ ರೀತಿಯಲ್ಲಿ ಸಾವನ್ನಪ್ಪಿತು ಎಂದಿಟ್ಟುಕೊಳ್ಳಿ, ಅದು ಅಪಮೃತ್ಯು.

ಒಬ್ಬ ಮನುಷ್ಯ ನೂರು ವರ್ಷ ಬದುಕಿದ್ದಾನೆ. ಆದರೆ ಮೇಲೆ ಹೇಳಿದ ದುರ್ಮರಣಗಳಿಂದ ಅವನು ಸತ್ತರೆ ಅದು ಅಪಮೃತ್ಯು.

ಮನುಷ್ಯ ಎಷ್ಟೇ ವರ್ಷ ಬದುಕಿರಲಿ, ಯಾವುದೇ ಆರೋಗ್ಯದ ಸಮಸ್ಯೆಯಿಲ್ಲದೆ ಅತ್ಯಂತ ಶಾಂತಿಯುತ ಸಾವನ್ನು ಪಡೆದಿದ್ದಾನೆ ಎಂದರೆ ಅವನು ತನಗಿರುವ ಆಯುಷ್ಯವನ್ನು ಪೂರ್ಣ ಪಡೆದಿದ್ದಾನೆ ಎಂದೇ ಅರ್ಥ.

ಇನ್ನು ಅಪಮೃತ್ಯುವಿನಲ್ಲಿಯೂ ದೇವರ ಸ್ಮರಣೆ ಮಾಡುತ್ತ, ದೇವರ ತೀರ್ಥವನ್ನು ಸೇವಿಸಿ, ಶಾಸ್ತ್ರಶ್ರವಣ ಮಾಡುತ್ತ ಸತ್ತಿದ್ದಾನೆ ಎಂದರೆ ಅದು ಅತ್ಯುತ್ತಮ ಸಾವು. ಅದರಿಂದ ಮಹತ್ತರ ವೈಷ್ಣವಜನ್ಮಗಳ ಪ್ರಾಪ್ತಿಯಾಗುತ್ತದೆ.

ಅವನ ಅಪಮೃತ್ಯುವಿಗೊಂದು ಪಾಪವಿತ್ತು. ದೇವರು ಅದರ ಫಲವನ್ನೂ ನೀಡಿದ. ಭಕ್ತನಾಗಿದ್ದ, ಹೀಗಾಗಿ ಅಂತ್ಯಕಾಲದಲ್ಲಿ ದೇವರು ತನ್ನ ಸ್ಮರಣೆಯನ್ನೂ ನೀಡಿದ. ದೇವರು ಕರುಣಾಮಯಿ ಮತ್ತು ಲೆಕ್ಕಾಚಾರ ತಪ್ಪದ ಸ್ವಾಮಿ ಅವನು.

## ಅಪಮೃತ್ಯುವಿನ ಕುರಿತು ಗರುಡದೇವರ ಗಂಭೀರ ಪ್ರಶ್ನೆ

ಈ ಅಪಮೃತ್ಯುವಿನ ಕುರಿತು ಗರುಡದೇವರು ತುಂಬ ಗಂಭೀರವಾದ ಪ್ರಶ್ನೆಯೊಂದನ್ನು ದೇವರಿಗೆ ಕೇಳಿದ್ದಾರೆ.

**ನಾಕಾಲೇ ಮ್ರಿಯತೇ ಕಶ್ಚಿತ್**
**ಇತಿ ವೇದಾನುಶಾಸನಮ್ ।**
**ಕಸ್ಮಾನ್ಮೃತ್ಯುಮವಾಪ್ನೋತಿ**
**ರಾಜಾ ವಾ ಶ್ರೋತ್ರಿಯೋಽಪಿ ವಾ ।।**

**ಯದುಕ್ತಂ ಬ್ರಹ್ಮಣಾ ಪೂರ್ವಂ**
**ಅನೃತಂ ತತ್ ಪ್ರದೃಶ್ಯತೇ ।**
**ವೇದೈರುಕ್ತಂ ತು ಯದ್ ವಾಕ್ಯಂ**
**ಶತಂ ಜೀವತಿ ಮಾನವಃ ।।**

**ತತ್ ಕಲೌ ನಚ ದೃಶ್ಯೇತ**
**ಕಸ್ಮಾದೇವಂ ಸಮಾದಿಶ ।।**

**“ಆಯುಷ್ಯ ಮುಗಿಯದೇ ಯಾರೂ ಸಾಯುವದಿಲ್ಲ ಎಂದು ವೇದಗಳು ಹೇಳುತ್ತವೆ. ಕಲಿಯುಗದ ಮಾನವರಿಗೆ ನೂರು ವರ್ಷ ಆಯುಷ್ಯ ಎಂದೂ ಹೇಳುತ್ತವೆ. ಆದರೆ ಕಲಿಯುಗದಲ್ಲಿ ಹಾಗೆ ಕಾಣುವದಿಲ್ಲ. ಅಂದಮೇಲೆ ವೇದಗಳು ಹೇಳಿದ್ದು ಸುಳ್ಳಾದಂತಾಯಿತಲ್ಲ. ರಾಜರೂ, ಶ್ರೋತ್ರಿಯರೂ ಅಕಾಲಮರಣವನ್ನು ಹೊಂದುತ್ತಾರಲ್ಲ. ಯಾಕೆ ಹೀಗೆ”** ಎಂದು ಗರುಡದೇವರು ವೇದಗಳ ಅಪ್ರಾಮಾಣ್ಯದ ಶಂಕೆಯವರೆಗೆ ಈ ಪ್ರಶ್ನೆಯ ಗಾಂಭೀರ್ಯವನ್ನು ಮನಗಾಣಿಸುತ್ತಾರೆ.

ಭಗವಂತ ಅತ್ಯಂತ ಸರಳವಾಗಿ ಈ ಸಮಸ್ಯೆಯನ್ನು ಬಗೆಹರಿಸಿ ವೇದಗಳು ಪರಮಪ್ರಮಾಣ ಎಂದು ಉತ್ತರಿಸುತ್ತಾನೆ —

> **ಮನುಷ್ಯಃ ಶತಜೀವೀ ಚ**
> **ಪುರಾ ವೇದೇನ ಭಾಷಿತಮ್ ।**
> **ವಿಕರ್ಮಣಃ ಪ್ರಭಾವೇನ**
> **ಶೀಘ್ರಂ ಚಾಪಿ ವಿನಶ್ಯತಿ ।।**

**“ವೇದಗಳು ಹೇಳುತ್ತಿರುವದು ಪರಮಸತ್ಯ. ಪ್ರತಿಯೊಬ್ಬ ಮನುಷ್ಯನಿಗೂ ನೂರು ವರ್ಷ ಆಯುಷ್ಯವಿರುತ್ತದೆ. ಆದರೆ, ಮನುಷ್ಯ ತಾನು ಮಾಡಿದ-ಮಾಡುವ ಕೆಟ್ಟ ಕರ್ಮಗಳ ಪ್ರಭಾವದಿಂದ ಆಯುಷ್ಯ ಹಾನಿ ಮಾಡಿಕೊಂಡು ಮರಣವನ್ನು ಹೊಂದುತ್ತಾನೆ.”**

ಇಷ್ಟು ಉತ್ತರ ನೀಡಿದ ಭಗವಂತ ಯಾವಯಾವ ಕುಕರ್ಮಗಳಿಂದ ಆಯುಷ್ಯ ಕ್ಷೀಣವಾಗುತ್ತದೆ ಎನ್ನುವದನ್ನು ಗರುಡದೇವರಿಗೆ ತಿಳಿಸುತ್ತಾನೆ.

ಕಲಿಯುಗದಲ್ಲಿ ಹುಟ್ಟುವ ಮನುಷ್ಯನಿಗೆ ನೂರು ವರ್ಷ ಆಯುಷ್ಯ ಎನ್ನುವದು ಸತ್ಯ. ಆದರೆ, ಪಾಪಕರ್ಮಗಳ ಪ್ರಭಾವದಿಂದ ಅದಕ್ಕಿಂತ ಮುಂಚೆಯೇ ಮೃತ್ಯುವುಂಟಾಗುತ್ತದೆ.

**ನೋಡಿ, ಕಲಿಯುಗದಲ್ಲಿ ಹುಟ್ಟುವ ಮನುಷ್ಯ ಪರಮಾವಧಿ ಬದುಕುವದು ನೂರು ವರ್ಷ.**

**ಈ  ನೂರು ವರ್ಷದ ಆಯುಷ್ಯವನ್ನು ಕೆಲವು ಪುಣ್ಯಕರ್ಮಗಳಿಂದ ಹೆಚ್ಚಾಗಿಯೂ ಮಾಡಿಕೊಳ್ಳಬಹುದು.**

**ಕೆಲವು ಪಾಪಗಳಿಂದ ಇರುವ ಆಯುಷ್ಯವೇ ಕಡಿಮೆಯಾಗುತ್ತದೆ.**

ಇರುವ ಆಯುಷ್ಯ ಪಾಪಗಳಿಂದ ಹೇಗೆ ಕಡಿಮೆಯಾಗಲು ಸಾಧ್ಯ ಎಂಬ ಪ್ರಶ್ನೆಗೆ ಉದಾಹರಣೆಯೊಂದಿಗೆ ಉತ್ತರ ಪಡೆಯೋಣ.

ನಾವು ಬದರೀಯಾತ್ರೆ ಮಾಡಿ ಬಂದಿದ್ದೇವೆ, ಒಂದಷ್ಟು ದಾನ ಮಾಡಿದ್ದೇವೆ, ಏಕಾದಶಿ ಉಪವಾಸ ಮಾಡಿದ್ದೇವೆ ಎಂದಿಟ್ಟುಕೊಳ್ಳೋಣ. ಯಾತ್ರೆಯಿಂದ, ದಾನದಿಂದ, ಉಪವಾಸದಿಂದ ಮಹತ್ತರವಾದ ಪುಣ್ಯ ಲಭಿಸಿರುತ್ತದೆ.

ಆದರೆ, ನಾವು ಯಾತ್ರೆ ಮಾಡಿ ಬಂದೆವು, ಗಂಗೆಯಲ್ಲಿ ಸ್ನಾನ ಮಾಡಿದೆವು, ನಾವು ದಾನ ಮಾಡಿದೆವು, ಉಪವಾಸ ಮಾಡಿದೆವು ಎಂದು ಇನ್ನೊಬ್ಬರ ಮುಂದೆ ಹೇಳುವದರಿಂದ[2] ಗಳಿಸಿದ ಪುಣ್ಯವೆಲ್ಲವೂ ನಾಶವಾಗುತ್ತದೆ. **"ಧರ್ಮಃ ಕ್ಷರತಿ ಕೀರ್ತನಾತ್"**

---

[2] ಗುರುಗಳ, ಹಿರಿಯರ  ಮುಂದೆ ವಿನಮ್ರವಾಗಿ ನಿವೇದಿಸಿಕೊಳ್ಳಬಹುದು.

ಹಾಗೆಯೇ ಮಹಾನುಭಾವರನ್ನು, ಶಾಸ್ತ್ರಗಳನ್ನು, ದೇವರನ್ನು ನಿಂದೆ ಮಾಡುವದರಿಂದಲೂ ನಾವು ಮಾಡಿದ ಪುಣ್ಯವನ್ನು ಕಳೆದುಕೊಳ್ಳುತ್ತೇವೆ.

ಕೆಲವು ಅತ್ಯವಶ್ಯವಾದ ಧರ್ಮದ ಆಚರಣೆ ಮಾಡದಿದ್ದಾಗಲೂ ಹಿಂದಿನ ಪುಣ್ಯ ನಾಶವಾಗುತ್ತದೆ —

ಶ್ರವಣದ್ವಾದಶಿಯಂದು ಉಪವಾಸ ಮಾಡದಿದ್ದರೆ ಐದು ವರ್ಷಗಳ ಕಾಲ ಗಳಿಸಿದ ಪುಣ್ಯವೆಲ್ಲವೂ ನಾಶವಾಗುತ್ತದೆ ಎಂದು ಆಚಾರ್ಯರು ತಿಳಿಸುತ್ತಾರೆ —

**ದ್ವಾದಶೀಂ ಶ್ರವಣೋಪೇತಾಂ**
**ಯೋ ನೋಪೇಷ್ಯಾತ್ ಸುಮಂದಧೀಃ ।**
**ಪಂಚಸಂವತ್ಸರಕೃತಂ**
**ಪುಣ್ಯಂ ತಸ್ಯ ವಿನಶ್ಯತಿ ।।**

ಹಾಗೆಯೇ ಅತಿಥಿ ಹಸಿದು ಮನೆಗೆ ಬಂದಾಗ ಉಣ್ಣಲು ನೀಡದಿದ್ದರೆ ಪುಣ್ಯ ನಾಶವಾಗುತ್ತದೆ —

**“ಅತಿಥಿರ್ಯಸ್ಯ ಭಗ್ನಾಶಃ**
**ಗೃಹಾತ್ ಪ್ರತಿನಿವರ್ತತೇ।**
**ಸ ತಸ್ಮೈ ದುಷ್ಕೃತಂ ದತ್ವಾ**
**ಪುಣ್ಯಮಾದಾಯ ಗಚ್ಛತಿ”**

ಇವೆಲ್ಲದರಿಂದ ತಿಳಿಯುವ ವಿಷಯ, ನಾವು ಕಷ್ಟಪಟ್ಟು ಪುಣ್ಯವನ್ನು ಗಳಿಸಿದ್ದರೂ, ಆ ಪುಣ್ಯ ಕೆಲವು ಕಾರಣಗಳಿಂದ ನಾಶವಾಗುತ್ತದೆ ಎಂದು.

**ಈಗ ಅಪಮೃತ್ಯುವಿನ ವಿಷಯಕ್ಕೆ ಬರೋಣ.**

ಇಷ್ಟು ವರ್ಷ ಆಯುಷ್ಯ ಎನ್ನುವದೂ ಸಹ ಒಂದು ಕರ್ಮದ ಫಲ. ಬದುಕುವ ಕರ್ಮ ಮುಗಿದ ತಕ್ಷಣ ನಾವು ಮರಣವನ್ನಪ್ಪುತ್ತೇವೆ.

ಈ ವ್ಯಕ್ತಿಗೆ ಇಷ್ಟು ಆಯುಷ್ಯ ಎಂದರೆ ಅಷ್ಟು ಆಯುಷ್ಯವನ್ನು ಅನುಭವಿಸುವ ಕರ್ಮ ಅವನಿಗಿದೆ ಎಂದರ್ಥ.

ಆ ಆಯುಷ್ಯವನ್ನು ನಾಶ ಮಾಡುವ ಕೆಲವು ಕರ್ಮಗಳನ್ನು ನಾವು ಮಾಡಿದಾಗ, ಅವು ನಮ್ಮ ಆಯುಷ್ಯದ ಪುಣ್ಯವನ್ನು ನಾಶ ಮಾಡುತ್ತವೆ.

ಮಾಡಿದ ದಾನವನ್ನು ಹೇಳಿಕೊಳ್ಳುವುದು ಎಂಬ ಅಧರ್ಮ, ಮಾಡಿದ ದಾನದಿಂದ ಬಂದ ಪುಣ್ಯವನ್ನು ನಾಶ ಮಾಡುವಂತೆ.

## ಆಯುಷ್ಯನಾಶ ಮಾಡುವ ಕರ್ಮಗಳು

ನಮಗಿಂತ ವಯಸ್ಸಿನಲ್ಲಿ ಹಿರಿಯರು ಬಂದಾಗ ನಾವು ಎದ್ದು ನಿಂತು ನಮಸ್ಕಾರ ಮಾಡದೇ ಇದ್ದರೆ ನಮ್ಮ ಆಯುಷ್ಯ ನಾಶವಾಗುತ್ತದೆ ಎಂದು ಮಹಾಭಾರತ ಹೇಳುತ್ತದೆ.

> ಊರ್ಧ್ವಂ ಪ್ರಾಣಾ ಹ್ಯುತ್ಕ್ರಾಮಂತಿ
> ಯೂನಃ ಸ್ಥವಿರ ಆಯತಿ ।
> ಪ್ರತ್ಯುತ್ಥಾನಾಭಿವಾದಾಭ್ಯಾಂ
> ಪುನಸ್ತಾನ್ ಪ್ರತಿಪದ್ಯತೆ ।

ಎದುರಿಗೆ ವಯೋವೃದ್ಧರು, ತಪೋವೃದ್ಧರು, ಜ್ಞಾನವೃದ್ಧರು ಬಂದಾಗ ಅವರನ್ನು ಗೌರವದಿಂದ ಬರಮಾಡಿಕೊಳ್ಳದಿದ್ದರೆ, ಅವರಿಗೆ ನಮಸ್ಕಾರ ಮಾಡದಿದ್ದರೆ ನಮ್ಮ ಆಯುಷ್ಯ ಕ್ಷೀಣವಾಗುತ್ತದೆ.

ಹಾಗೆಯೇ, ನಿಷಿದ್ಧ ದಿವಸಗಳಲ್ಲಿ ಕ್ಷೌರ ಮಾಡಿಸಿಕೊಳ್ಳುವದರಿಂದ, ಗಂಡಸರು ಮಂಗಳವಾರ ಅಭ್ಯಂಗ ಮಾಡುವದರಿಂದ, ಅತಿಯಾಗಿ ಉಣ್ಣುವದರಿಂದ, ತಿನ್ನಬಾರದ್ದನ್ನು ತಿನ್ನುವದರಿಂದ, ತಿನ್ನಬಾರದ ರೀತಿಯಲ್ಲಿ, ತಿನ್ನಬಾರದ ಸಮಯದಲ್ಲಿ ತಿಂದು ಕುಡಿದು ಮಾಡುವದರಿಂದ, ರಾತ್ರಿಯ ಹೊತ್ತು ಮೊಸರನ್ನ ಊಟ ಮಾಡುವದರಿಂದ ಹೀಗೆ ಅನೇಕ ಕಾರಣಗಳಿಂದ ಆಯುಷ್ಯ ಕ್ಷೀಣವಾಗುತ್ತದೆ.

ಅತಿಯಾದ ಮೈಥುನದಿಂದ, ಅಕಾಲ ಮೈಥುನದಿಂದ, ಹಸ್ತಮೈಥುನದಿಂದ ಆಯುಷ್ಯ ಕ್ಷೀಣವಾಗುತ್ತದೆ ಎಂದು ಧರ್ಮಶಾಸ್ತ್ರ, ವೈದ್ಯಶಾಸ್ತ್ರಗಳು ತಿಳಿಸುತ್ತವೆ.

ವಿಚಿತ್ರವೀರ್ಯ ಮೃತನಾದದ್ದೆ ಅತಿಯಾದ ಮೈಥುನದಿಂದ ಎಂದು ಆಚಾರ್ಯರು ತಿಳಿಸುತ್ತಾರೆ. **“ಅತಿಸಕ್ತಾಃ ತಪೋಹೀನಾಃ ಕಥಂಚಿನ್ಮೃತಿಮಾಪ್ನುಯುಃ” ಎಂದು.**

## ಅಪಮೃತ್ಯುವಿಗೆ ದೃಷ್ಟಾಂತಗಳು

ಹುಟ್ಟುವ ಪ್ರತಿಯೊಬ್ಬ ಮನುಷ್ಯನಿಗೂ, ನೂರು ವರ್ಷದ ಪೂರ್ಣಾಯುಷ್ಯ ಇದ್ದೇ ಇರುತ್ತದೆ, ಇದು ಸಾಮಾನ್ಯ ನಿಯಮ.

**ಈ ನಿಯಮಕ್ಕೆ ಮೊದಲ ಅಪವಾದ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಗಳು.**

ಆ ಪಾಪಗಳು ನೂರು ವರ್ಷದ ಆಯುಷ್ಯವನ್ನು ಮೊಟಕುಗೊಳಿಸುತ್ತವೆ. ನೂರರಲ್ಲಿ ಮೂವತ್ತು ವರ್ಷಗಳು ಹಿಂದಿನ ಜನ್ಮಗಳ ಪಾಪದಿಂದ ಹೋದವು ಎಂದಿಟ್ಟುಕೊಳ್ಳೋಣ. ಅವನಿಗೆ ಎಪ್ಪತ್ತು ವರ್ಷ ಆಯುಷ್ಯವಿದೆ.

ಹುಟ್ಟಿಬಂದು ಮಹಾಪುಣ್ಯವನ್ನು ಸಂಪಾದಿಸಿ, ಭಗವಂತನ ಗುರುಗಳ ಸೇವೆಯಿಂದ ಹಿಂದಿನ ಪಾಪವನ್ನು ನಾಶ ಮಾಡಿಕೊಂಡರೆ ಎಪ್ಪತ್ತರ್ಕ್ಕಿಂತಲೂ ಹೆಚ್ಚು ಬದುಕುತ್ತಾನೆ. ಕಾರಣ, ಎಪ್ಪತ್ತಕ್ಕೆ ಸಾವು ನೀಡುವ ಪಾಪ ನಾಶವಾಗಿದೆ.

**ಇನ್ನು ಪಾಪಗಳಿಂದ ಇರುವ ಆಯುಷ್ಯವೂ ಕ್ಷೀಣವಾಗುತ್ತದೆ. ಇದು ಆ ನಿಯಮಕ್ಕೆ ಎರಡನೆಯ ಅಪವಾದ.**

ನೂರು ವರ್ಷ ಪಡೆಯಬೇಕಾಗಿದ್ದವನು, ಹಿಂದಿನ ಜನ್ಮಗಳ ಪಾಪದಿಂದ ಮೂವತ್ತನ್ನು ಕಳೆದುಕೊಂಡು, ಎಪ್ಪತ್ತು ವರ್ಷ ಆಯುಷ್ಯವನ್ನಿಟ್ಟುಕೊಂಡು ಹುಟ್ಟಿಬಂದ. ಅಷ್ಟು ವರ್ಷ ಬದುಕಬೇಕಾಗಿದ್ದ ಅವನು ಕೆಲವು ಮಹತ್ತರ ಪಾಪಗಳನ್ನು ಮಾಡಿ ಎಪ್ಪತ್ತನ್ನು ಐವತ್ತಕ್ಕೆ ಮೊಟಕುಗೊಳಿಸಿಕೊಂಡ.

ಆಗ ಐವತ್ತಕ್ಕೆ ಅವನಿಗೆ ಸಾವುಂಟಾಗುತ್ತದೆ.

ಇದು ಅಪಮೃತ್ಯು.

ಈ ಅಪಮೃತ್ಯುವಿನಲ್ಲಿ ಮತ್ತೆ ಎರಡು ವಿಧ.

ರೋಗಗಳಿಂದ ಉಂಟಾಗುವ ಸಾವು ಮತ್ತು ಅಸಹಜ ಸಾವು, ಅಂದರೆ ದುರ್ಮರಣ.

ರಾತ್ರಿ ಮೊಸರನ್ನವನ್ನು ತಿಂದು, ಅತಿಯಾದ ಮೈಥುನದಲ್ಲಿ ಆಸಕ್ತನಾಗಿ ಮುಂತಾದ ಸಾಮಾನ್ಯ ಕಾರಣಗಳಿಂದ ಅಪಮೃತ್ಯು ಉಂಟಾದಾಗ ರೋಗಗಳಿಂದ ಸಾವುಂಟಾಗುತ್ತದೆ. ಅಂದರೆ, ದೇಹದ ಅವಯವಗಳು ಖಾಯಿಲೆಗೀಡಾಗಿ ಸಾವನ್ನಪ್ಪುತ್ತಾನೆ[3]. ಅತಿಯಾದ ಮೈಥುನದಿಂದ ಕ್ಷಯವನ್ನು ಪಡೆದು ವಿಚಿತ್ರವೀರ್ಯ ಸತ್ತಂತೆ. ಅದು ದುರ್ಮರಣವಲ್ಲ, ಆದರೆ ಅದು ಅಪಮೃತ್ಯುವೇ. ಕಾರಣ, ಶಾಸ್ತ್ರ ಹೇಳುವಂತೆ ಉತ್ಕೃಷ್ಟವಾಗಿ ಬದುಕದೇ, ನಿಕೃಷ್ಟವಾಗಿ ಬದುಕಿದ್ದರಿಂದ ಉಂಟಾಗಿರುವ ನಿಕೃಷ್ಟವಾದ ಮರಣವದು.

ಇನ್ನು ಸ್ವೋತ್ತಮದ್ರೋಹ, ದೇವಸ್ಥಾನದ, ಯತಿಗಳ, ಬ್ರಾಹ್ಮಣರ, ವಿಧವೆಯರ ಹಣವನ್ನು ಕದಿಯುವದು, ಒಬ್ಬ ಮನುಷ್ಯನ ಉದ್ಯೋಗಕ್ಕೆ ಸಂಚಕಾರ ತಂದು ನೀಡುವದು ಮುಂತಾದ

---

[3] ಇಲ್ಲಿ ಮತ್ತೊಂದು ಸೂಕ್ಷ್ಮವಿದೆ. ಒಬ್ಬ ಮನುಷ್ಯ ಖಾಯಿಲೆಗೀಡಾಗಿ ನರಳುತ್ತಿರಬಹುದು. ಆದರೆ ಸಾವು ಖಾಯಿಲೆಯಿಂದಾಗದೆ ಆಯುಷ್ಯ ಮುಗಿದಿದ್ದಕ್ಕಾಗಿ ಉಂಟಾದರೆ ಅದು ಅಪಮೃತ್ಯುವಲ್ಲ. ಈ ವ್ಯತ್ಯಾಸವನ್ನು ತಿಳಿಯಲು ಸಾಮಾನ್ಯರಿಗೆ ಸಾಧ್ಯವಿಲ್ಲ.

ಮಹತ್ತರ ಪಾಪಗಳಿಂದ ಅಪಘಾತ ಮುಂತಾದ ದುರ್ಮರಣವನ್ನು ಪಡೆಯುತ್ತಾನೆ.

ಆ ಪಾಪಗಳು ಈ ಜನ್ಮದ್ದೇ ಆಗಿರಬೇಕು ಎಂದು ನಿಯಮವಿಲ್ಲ. ಹಿಂದಿನ ಜನ್ಮದ್ದೂ ಆಗಿರಬಹುದು. ಆ ಯಾವುದೋ ಪಾಪ ಈಗ ಫಲವನ್ನು ನೀಡುತ್ತದೆ, ಅದರಿಂದ ದುರ್ಮರಣ ಉಂಟಾಗುತ್ತದೆ.

## ಅಪಮೃತ್ಯುವಿನ ಪರಿಹಾರಕ್ಕಾಗಿ ಏಕೆ ಬೇಡಬೇಕು

ಅತಿ ದೀರ್ಘಕಾಲದ ವರೆಗೆ ಕ್ರಿಮಿಯಾಗಿ, ಕೀಟವಾಗಿ, ಪಶುವಾಗಿ, ಗಿಡ-ಮರವಾಗಿ, ಅಥವಾ ನರಕದಲ್ಲಿಯೇ ಬಿದ್ದು ದುಃಖವನ್ನನುಭವಿಸಬೇಕಾದಷ್ಟು ಪಾಪ ಪ್ರತಿಯೊಬ್ಬ ಮನುಷ್ಯನಿಗೂ ಇರುತ್ತದೆ.

ಅಂತಹುದರಲ್ಲಿ ಪರಮಾತ್ಮ ಮನುಷ್ಯಜನ್ಮಕ್ಕೆ ಯೋಗ್ಯವಾದ ಪುಣ್ಯವನ್ನು ಮಾತ್ರ ಸಂಗ್ರಹಿಸಿ ಅವನಿಗೆ ಮನುಷ್ಯಜನ್ಮವನ್ನು ನೀಡುವದು ಅವನು ಸಾಧನೆ ಮಾಡಿಕೊಳ್ಳಲಿ, ಈ ಜನ್ಮ ಮರಣಗಳ ಸಂಕೋಲೆಯಿಂದ ದೂರವಾಗಲಿ ಎಂದು.

ಆದರೆ, ಮಂದಮತಿಯ ನಾವು ಮತ್ತೆ ಪಾಪ ಮಾಡಿ ಬಿಡುತ್ತೇವೆ. ಸಾಧನೆ ಮಾಡಬೇಕು ಎಂದು ಬುದ್ಧಿ ಬರುವ ವೇಳೆಗೆ, ಮಾಡಿದ ಪಾಪಗಳಿಂದ ಅಪಮೃತ್ಯು ಹತ್ತಿರವಾಗಿಬಿಡುತ್ತದೆ.

ಈ ರೀತಿಯಾಗಿ ಮನುಷ್ಯಜನ್ಮವನ್ನು ಹಾಳು ಮಾಡಿಕೊಳ್ಳುವವರು ಪರಮಾತ್ಮನಿಗೆ ಪ್ರಿಯರಾಗುವದಿಲ್ಲ. ಮನುಷ್ಯಜನ್ಮದಲ್ಲಿಯೇ ಅನುಭವಿಸಬೇಕಾದ ಆಯುಷ್ಯವನ್ನು ಕಡಿಮೆ ಮಾಡಿಕೊಂಡ ಈ ಜೀವನಿಗೆ ಮತ್ತೆ ಮನುಷ್ಯಜನ್ಮ ಬರುವದು ದುರ್ಲಭ.

ಹೀಗಾಗಿ ಮಾಡಿದ ಪಾಪ ನಾಶವಾಗಬೇಕು. ಅಪಮೃತ್ಯು ಬರಬಾರದು. ಅದಕ್ಕಾಗಿ ಅಪಮೃತ್ಯುವಿನ ಪರಿಹಾರಕ್ಕೆ ಮುಖ್ಯಪ್ರಾಣನ ಪ್ರಾರ್ಥನೆಯನ್ನು ಮಾಡಬೇಕು.

ಅಪಮೃತ್ಯು ಪರಿಹರಿಸೋ ಅನಿಲದೇವ ಎಂಬ ಹಾಡಿನಲ್ಲಿ ಶ್ರೀ ಜಗನ್ನಾಥದಾಸಾರ್ಯರು ಈ ಮಹತ್ತ್ವದ ಅಂಶವನ್ನು ಪ್ರಾರ್ಥನೆಯ ಮುಖಾಂತರವೇ ತಿಳಿಸುತ್ತಾರೆ.

**ಸಾಧನಶರೀರವಿದು ನೀ ದಯದಿ ಕೊಟ್ಟದ್ದು**
**ಸಾಧಾರಣವಲ್ಲ ಸಾಧುಪ್ರಿಯನೇ।**
**ವೇದವಾದೋದಿತ ಜಗನ್ನಾಥವಿಠಲನ**
**ಪಾದಭಜನೆಯಿತ್ತು ಮೊದ ಕೊಡೋ ಸತತ ।।**

**ಅಪಮೃತ್ಯು ಪರಿಹರಿಸೋ ಅನಿಲದೇವ**
**ಕೃಪಣವತ್ಸಲನೇ ಕಾವರ ಕಾಣೆ ಜಗದೊಳಗೆ**

ಇದು ಭೋಗಶರೀರವಲ್ಲ, ಸಾಧನಶರೀರ. ಸಾಧನೆಯನ್ನೇ ಮಾಡಬೇಕು. ಆದರೆ ಮಾಡಿಲ್ಲ, ಅದಕ್ಕಾಗಿ ಅಪಮೃತ್ಯು ಬಂದೊದಗಿದೆ. ಆ ಅಪಮೃತ್ಯುವನ್ನು ಪರಿಹರಿಸು. ಮಾಡಿದ ಪಾಪವನ್ನು ಕಳೆ. ಕಳೆದು, ಇರುವ ಸಮಗ್ರ ಆಯುಷ್ಯದಲ್ಲಿ ಜಗನ್ನಾಥವಿಠಲನ ಪಾದಭಜನೆಯನ್ನು ಸತತ ಇತ್ತು ಸಲಹೋ.

ತಿಳಿಸಬೇಕಾದ ಸಮಗ್ರವನ್ನೂ ಶ್ರೀ ಜಗನ್ನಾಥದಾಸಾರ್ಯರು ತಿಳಿಸಿದ್ದಾರೆ.

ಮತ್ತೂ ಒಂದು ಕಾರಣವಿದೆ.

ಅಪಮೃತ್ಯುವಿನ ಎರಡನೆಯ ರೂಪ, ದುರ್ಮರಣ. ಮಹಾಪಾತಕಗಳನ್ನು ಮಾಡಿದ್ದಾಗ ದುರ್ಮರಣವುಂಟಾಗುತ್ತದೆ. ದುರ್ಮರಣವಾದಾಗ ಪಿಶಾಚಾದಿ ಯೋನಿಗಳು ದೊರೆಯುತ್ತವೆ. ಉದ್ಧಾರ ಇನ್ನೂ ಕಷ್ಟ. ಆ ದುರ್ಮರಣ ರೂಪವಾದ ಅಪಮೃತ್ಯುವಿನಿಂದ ಪಾರಾಗಲು ದೇವರನ್ನು ವಾಯುದೇವರನ್ನು ಗುರುಗಳನ್ನು ಪ್ರಾರ್ಥಿಸಲೇ ಬೇಕು.

ಶ್ರೀ ಬ್ರಹ್ಮಣ್ಯತೀರ್ಥಗುರುಸಾರ್ವಭೌಮರು ರಾಮಾಚಾರ್ಯರ ಅಪಮೃತ್ಯುವನ್ನು ಪರಿಹರಿಸಿದ್ದಾಗಲೀ, ಶ್ರೀ ವಾದಿರಾಜಗುರು ಸಾರ್ವಭೌಮರು ಒಬ್ಬ ರಾಜಕುಮಾರನನ್ನು ಬದುಕಿಸಿದ್ದಾಗಲೀ, ಶ್ರೀ ವಿಜಯದಾಸಾರ್ಯರು ಮೋಹನದಾಸರ ಅಪಮೃತ್ಯುವನ್ನು ಪರಿಹರಿಸಿದ್ದಾಗಲೀ ಇದೇ ರೀತಿಯಲ್ಲಿ.

ಎಷ್ಟು ಆಯುಷ್ಯವಿತ್ತೋ ಆ ಆಯುಷ್ಯವನ್ನು ತಮ್ಮ ಕರ್ಮದಿಂದ ಅವರು ಕಳೆದುಕೊಂಡಿದ್ದಾಗ ಕಾರುಣ್ಯದಿಂದ, ಮುಂದಾಗಬೇಕಾಗಿರುವ

ಮಹತ್ತ್ವದ ಕಾರಣಗಳಿಗಾಗಿ ಈ ಮಹಾನುಭಾವರು ಅವರನ್ನು ಬದುಕುಳಿಸಿದರು.

## ಅಪಮೃತ್ಯುವಿಗೆ ಒಳಗಾದವರ ಉದ್ಧಾರಕ್ಕೆ ನಾವೇನು ಮಾಡಬಹುದು

ಕರ್ಮ ಯಾರನ್ನೂ ಬಿಟ್ಟದ್ದಲ್ಲ. ನಮಗೆ ಅತ್ಯಂತ ಪ್ರೀತಿಪಾತ್ರರು ಅಪಮೃತ್ಯುವಿಗೆ ಈಡಾಗಿರಬಹುದು. ಅವರ ಉದ್ಧಾರಕ್ಕಾಗಿ ನಾವು ಸತ್ಕರ್ಮಗಳ ಆಚರಣೆಯನ್ನು ಮಾಡಬೇಕು.

ಶಾಸ್ತ್ರಗಳಲ್ಲಿ ಧರ್ಮೋದಕ ವಿಹಿತವಾಗಿರುವದು ಇದೇ ಕಾರಣಕ್ಕೆ. ಸತ್ತ ಹತ್ತನೆಯ ದಿವಸ ಬಂಧುಗಳೆಲ್ಲರೂ ಸೇರಿ ತಾವು ಮಾಡಿದ ಯಾವುದಾದರೂ ಸತ್ಕರ್ಮವನ್ನು ಆ ಜೀವಕ್ಕೆ ನೀಡುತ್ತಾರೆ. ಅಂದರೆ, ಆ ಜೀವ ಈ ಎಲ್ಲ ಪುಣ್ಯದಿಂದ ಇನ್ನೂ ಎತ್ತರಕ್ಕೆ ಏರುತ್ತದೆ.

ಇನ್ನು ಮಕ್ಕಳು ಸತ್ತಾಗ ಆ ಜೀವದ ಉದ್ಧಾರಕ್ಕಾಗಿ ವಿಶೇಷ ದಾನ ಧರ್ಮಗಳನ್ನು ಮಾಡಬೇಕು ಎಂದು ಭಗವಂತ ಆದೇಶಿಸುತ್ತಾನೆ —

**ಸ್ವಲ್ಪಾಯುರ್ನಿರ್ಧನೋ ಭೂತ್ವಾ**
**ರತಿಭುಕ್ತಿವಿವರ್ಜಿತಃ ।**
**ಪುನರ್ಜನ್ಮ ವಿಶೇಜ್ಜಂತುಃ**
**ತಸ್ಮಾದ್ ದೇಯಂ ಮೃತೇ ಶಿಶೌ ।**

ಮಗು ಅಲ್ಪಾಯುಷ್ಯದಲ್ಲೇ ಸತ್ತಿದೆ ಎಂದರೆ ದೀರ್ಘಕಾಲ ಬದುಕುವ ಪುಣ್ಯ ಇಲ್ಲ ಎಂದರ್ಥ. ಆ ಜೀವದ ಪಾಪ ನಾಶವಾಗಲಿ, ದೀರ್ಘಾಯುಷ್ಯದ ಸಾಧನೆಯ ಪುಣ್ಯ ಮುಂದಿನ ಜನ್ಮದಲ್ಲಿ ಒದಗಿಬರಲಿ ಎಂದು ದಾನ ಮಾಡಬೇಕು.

ಇನ್ನು ಅಲ್ಪಾಯುಷ್ಯದಲ್ಲೇ ಸತ್ತಾಗ ಏನೂ ದಾನ ಧರ್ಮ ಮಾಡಿಕೊಂಡಿರುವದಿಲ್ಲ. ಹೀಗಾಗಿ ಮುಂದಿನ ಜನ್ಮದಲ್ಲಿ ನಿರ್ಧನನಾಗಿ ಹುಟ್ಟುತ್ತಾನೆ. ಅದಕ್ಕಾಗಿಯೂ  ಆ ಮಗುವನ್ನುದ್ದೇಶಿಸಿ ದಾನ ಮಾಡಬೇಕು.

ಅಷ್ಟೆ ಅಲ್ಲ, ಮಕ್ಕಳು ಸತ್ತಾಗ, ಮಕ್ಕಳಿಗೇ ವಿಶೇಷವಾಗಿ ಹಾಲು ಹಣ್ಣು ಮುಂತಾದವನ್ನು ನೀಡಬೇಕು ಎನ್ನುತ್ತಾನೆ ಭಗವಂತ —  **“ದುಗ್ಧಂ ದೇಯಂ ಶಿಶೌ ಮೃತೇ”** ಎಂದು.

ಇನ್ನು ಆತ್ಮಹತ್ಯೆ, ಕೊಲೆ, ಭಯಂಕರ ಅಪಘಾತ ಮುಂತಾದ ದುರ್ಮರಣವಾದರಂತೂ ಪಿಶಾಚಜನ್ಮ ಬರುವ ಸಾಧ್ಯತೆಯಿದೆ. ಹೀಗಾಗಿ ಅಶೌಚ ಮುಗಿದ ತಕ್ಷಣ ಭಾಗವತದ ವಾಚನವನ್ನು, ಭಾಗವತದ ಪ್ರವಚನವನ್ನು ಮಾಡಿಸಬೇಕು.

ಗೋಕರ್ಣನ ತಮ್ಮ ಧುಂಧುಕಾರಿ ಪಿಶಾಚ ಜನ್ಮದಿಂದ ಉದ್ಧಾರವಾದದ್ದು ಶ್ರೀಮದ್ ಭಾಗವತ ಸಪ್ತಾಹದಿಂದಲೇ.

ಹೀಗಾಗಿ ಅವಶ್ಯವಾಗಿ ದುರ್ಮರಣಕ್ಕೀಡಾದವರ ಉದ್ದಾರಕ್ಕಾಗಿ ಶ್ರೀಮದ್ ಭಾಗವತ ಸಪ್ತಾಹ, ಶಾಸ್ತ್ರಗಳ ಪಾಠ ಪ್ರವಚನವನ್ನು ಮಾಡಿಸಬೇಕು.

ಸತ್ತು ಒಂದು ವರ್ಷವಾದ ಬಳಿಕ ಎಲ್ಲ ತೀರ್ಥಕ್ಷೇತ್ರಗಳಿಗೆ ಹೋಗಿ, ಆ ಜೀವದ ಉದ್ಧಾರಕ್ಕಾಗಿ ಸಂಕಲ್ಪಿಸಿ ಸ್ನಾನ-ದರ್ಶನಗಳನ್ನು ಮಾಡಬೇಕು ಮತ್ತು ಅವಶ್ಯವಾಗಿ ಅವರ ತೀರ್ಥಶ್ರಾದ್ಧವನ್ನು ಮಾಡಬೇಕು.

ಇಷ್ಟೆಲ್ಲ ಮಾಡಲು ಸಾಧ್ಯವಿಲ್ಲ ಎಂದರೆ ಅಪಮೃತ್ಯು ಪರಿಹಾರ ಮಾಡುವ ಮಹಾಸಾಮರ್ಥ್ಯವುಳ್ಳ ಶ್ರೀ

ಬ್ರಹ್ಮಣ್ಯತೀರ್ಥರು, ಶ್ರೀ ಶ್ರೀಪಾದರಾಜರು, ಶ್ರೀ ವ್ಯಾಸರಾಜರು, ಶ್ರೀ ವಾದಿರಾಜರು, ಶ್ರೀಮನ್ ಮಂತ್ರಾಲಯ ಪ್ರಭುಗಳು ಮುಂತಾದ ಮಹಾನುಭಾವರ ವೃಂದಾವನಗಳ ಬಳಿಗೆ ಹೋಗಿ ಮೈ ದಣಿಯೆ, ಮನ ದಣಿಯೆ ನಮಸ್ಕಾರಗಳನ್ನು ಹಾಕಿ ಆ ಪುಣ್ಯ ಆ ಜೀವನಿಗೆ ಸೇರಲಿ ಎಂದು ಸಂಕಲ್ಪಿಸಬೇಕು. ಆ ಜೀವವನ್ನು ಉದ್ಧರಿಸಿ ಎಂದು ಪ್ರಾರ್ಥಿಸಬೇಕು. ಸಕಲ ತೀರ್ಥಕ್ಷೇತ್ರಗಳ ಸನ್ನಿಧಾನ ಆ ವೃಂದಾವನಗಳಲ್ಲಿ ಇರುವದರಿಂದ, ಜೀವನನ್ನು ಪಾಪಕೂಪಾರದಿಂದ ಉದ್ಧರಿಸುವ ಸಾಮರ್ಥ್ಯ ಆ ಗುರುಗಳಿಗಿರುವದರಿಂದ ಅವರ ಸೇವೆ ಮಹಾಫಲಪ್ರದ.

ಅದೂ ಸಾಧ್ಯವಿಲ್ಲದಿದ್ದಲ್ಲಿ ಪ್ರತೀನಿತ್ಯ ಆ ಜೀವಕ್ಕಾಗಿ ಒಂದು ಸ್ತೋತ್ರದ ಪಾರಾಯಣ, ಒಂದು ತುಳಸೀ ದಳ, ಒಂದು ಹೂವನ್ನಾದರೂ ಸಮರ್ಪಿಸಬೇಕು.

ಇದೂ ಸಾಧ್ಯವಿಲ್ಲದಿದ್ದಲ್ಲಿ ಸರ್ವಮೂಲ-ಟೀಕಾ-ವ್ಯಾಸತ್ರಯ-ಮಧ್ವವಿಜಯ ಮುಂತಾದ ಶಾಸ್ತ್ರಗ್ರಂಥಗಳನ್ನು ಮಣೆಯ ಮೇಲಿಟ್ಟು, ಅದರ

ಮುಂದೆ ದೀಪವನ್ನು ಹಚ್ಚಿ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಬೇಕು.

ಇದ್ಯಾವುದೂ ಸಾಧ್ಯವೇ ಇಲ್ಲದ ಅವಸ್ಥೆ ದೇಹಕ್ಕಿದೆ ಎಂದಾಗ ಶ್ರೀಹರಿಯ ಸ್ಮರಣೆ ಮಾಡಿ ಆ ಸ್ಮರಣೆಯ ಪುಣ್ಯವನ್ನು ಆ ಜೀವಕ್ಕೆ ನೀಡಬೇಕು.

ಹರಿಸ್ಮರಣೆಯಿಂದ ಪರಿಹಾರವಾಗದ ಪಾಪ ಯಾವುದಿದೆ?

## ಆಯುಷ್ಯವನ್ನು ವೃದ್ಧಿ ಮಾಡುವ ಕರ್ಮಗಳು

ಮಾನವ ಜನ್ಮ ದೊಡ್ಡದು. ಮಾನವಜನ್ಮದಿಂದಲೇ ಉದ್ಧಾರ ಸಾಧ್ಯ. ಕಳೆದು ಹೋದರೆ ಮತ್ತೆ ಪಡೆಯಲು ಲಕ್ಷಾಂತರ ಯೋನಿಗಳನ್ನು ದಾಟಿ ಬರಬೇಕು. ಹೀಗಾಗಿ ಮಾನವಜನ್ಮದಲ್ಲಿ ಸಮೃದ್ಧ ಆಯುಷ್ಯವಿರಬೇಕು, ಮತ್ತು ಇರುವ ಆಯುಷ್ಯದಿಂದ ಸಾಧನೆಯನ್ನು ಮಾಡಿಕೊಳ್ಳಬೇಕು.

ಆಯುಷ್ಯ ಹಾನಿಯಾಗುವ ಕರ್ಮಗಳನ್ನು ಮಾಡತಕ್ಕದ್ದಲ್ಲ.

ಆಯುಷ್ಯ ಅಭಿವೃದ್ಧಿಯಾಗಲು ಸಕಾಮ ಕರ್ಮಗಳನ್ನು ಮಾಡದೇ ಇದ್ದರೂ, ಯಾವ ಸತ್ಕರ್ಮಗಳನ್ನು ಮಾಡುವದರಿಂದ ಸಹಜವಾಗಿ ಆಯುಷ್ಯ ಅಭಿವೃದ್ಧವಾಗುತ್ತದೆಯೋ ಅಂತಹ ಕರ್ಮಗಳನ್ನು ಮಾಡತಕ್ಕದ್ದು.

**ಅಭಿವಾದನಶೀಲಸ್ಯ**
**ನಿತ್ಯಂ ವೃದ್ಧೋಪಸೇವಿನಃ।**
**ಚತ್ವಾರಿ ತಸ್ಯ ವರ್ಧಂತೇ**
**ಆಯುರ್ಧರ್ಮೋ ಯಶೋ ಬಲಮ್॥**

ಎಂದು ಹಿಂದಿನವರು ಹೇಳಿದ್ದಾರೆ.

ನಮಗಿಂತ ಹಿರಿಯರಿಗೆ ನಮಸ್ಕಾರ ಮಾಡುವದರಿಂದ, ನಿರಂತರವಾಗಿ ದೊಡ್ಡವರ ಸೇವೆ ಮಾಡುವದರಿಂದ ಆಯುಷ್ಯ, ಧರ್ಮ, ಯಶಸ್ಸು, ಬಲ ನಾಲ್ಕರ ವೃದ್ಧಿಯಾಗುತ್ತದೆ ಎಂದು.

ಇವುಗಳ ಅಪೇಕ್ಷೆಗಾಗಿ ಅವರಿಗೆ ನಮಸ್ಕಾರ ಸೇವೆಗಳನ್ನು ಮಾಡುವದಲ್ಲ. ಗೌರವ

ಭಕ್ತಿಯಿಂದಲೇ ಅವನ್ನು ಮಾಡಿದಾಗ ಸಹಜವಾಗಿ ಈ ಫಲಗಳು ದೊರೆಯುತ್ತವೆ. ಶಾಖ ಬೇಕೆಂದು ಬೆಂಕಿ ಹೊತ್ತಿಸಿದರೆ ಬೆಳಕೂ ದೊರೆಯುವಂತೆ.

ಶಾಸ್ತ್ರವಿಹಿತವಾದ ದಿವಸಗಳಲ್ಲಿ ಕ್ಷೌರ, ಅಭ್ಯಂಗ, ಹಿತ ಮತ್ತು ಮಿತವಾದ ಆಹಾರ, ಭೋಗಗಳಿಂದ ಆಯುಷ್ಯ ಅಭಿವೃದ್ಧವಾಗುತ್ತದೆ.

ಇನ್ನು ಏಕಾದಶಿ, ಚಾತುರ್ಮಾಸ್ಯ ಮುಂತಾದ ತಪಸ್ಸಿನ ಆಚರಣೆ ಮಾಡುವದರಿಂದ ಆಯುಷ್ಯ ಅಭಿವೃದ್ಧವಾಗುತ್ತದೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಶ್ರೇಷ್ಠ ಪರಂಪರೆಯಲ್ಲಿ ನೂರಿಪ್ಪತ್ತು ವರ್ಷಗಳ ಕಾಲ ಆಯುಷ್ಯವನ್ನು ಪಡೆದು ಸ್ವೇಚ್ಛೆಯಿಂದ ಸಶರೀರರಾಗಿ ವೃಂದಾವನ ಪ್ರವೇಶ ಮಾಡಿದ ಶ್ರೀವಾದಿರಾಜ ಗುರುಸಾರ್ವಭೌಮರ ಇತಿಹಾಸವನ್ನು ಕೇಳಿದ್ದೇವೆ.

ಶ್ರೀಮದಾಚಾರ್ಯರ ತಮ್ಮಂದಿರಾದ ಶ್ರೀ ವಿಷ್ಣುತೀರ್ಥರು ಇಂದಿಗೂ ಜೀವಂತವಾಗಿದ್ದಾರೆ.

ಸುಮಾರು ಏಳುನೂರು ವರ್ಷಗಳಾಗಿವೆ ಅವರು ಅವತರಿಸಿ.

ಶ್ರೀ ಬ್ರಹ್ಮಣ್ಯತೀರ್ಥರ ಗುರುಗಳಾದ ಶ್ರೀ ಪುರುಷೋತ್ತಮತೀರ್ಥರು, ಶ್ರೀ ಶೇಷಚಂದ್ರಿಕಾಚಾರ್ಯರ ಗುರುಗಳಾದ ಶ್ರೀ ಲಕ್ಷ್ಮೀನಾರಾಯಣತೀರ್ಥರು ಇವರೆಲ್ಲರೂ ಇಂದಿಗೂ ಜೀವಂತವಾಗಿದ್ದಾರೆ.

ಇದಕ್ಕೆ ಕಾರಣ ಅವರ ದಿವ್ಯವಾದ ತಪಸ್ಸು.

ಹಾಗೆಯೇ ನೂರಕ್ಕಿಂತಲೂ ಹೆಚ್ಚು ವರ್ಷ ಬದುಕಿದ ನೂರಾರು ಮಹನೀಯರನ್ನು ಕೇಳುತ್ತೇವೆ.

ಶ್ರೀಮದುಡುಪಿಯ ಶ್ರೀ ಉಪೇಂದ್ರತೀರ್ಥ ಸಂಸ್ಥಾನದ (ಶ್ರೀ ಪುತ್ತಿಗೆ ಮಠದ) ಪ್ರಾತಃಸ್ಮರಣೀಯರಾದ ಶ್ರೀ ಸುಧೀಂದ್ರತೀರ್ಥಶ್ರೀಪಾದಂಗಳವರು.

ಶ್ರೀ ಶ್ರೀಪಾದರಾಜಸಂಸ್ಥಾನದ ಪರಂಪರೆಯಲ್ಲಂತೂ ಬಹುತೇಕ ಎಲ್ಲರೂ ಶತಾಯುಷಿಗಳೇ, ಶತಾಧಿಕ ಆಯುಷ್ಯವುಳ್ಳವರೇ.

ಸಾಮಾನ್ಯಜನರಲ್ಲಿಯೂ ಈ ರೀತಿಯಲ್ಲಿ ಕಾಣುತ್ತೇವೆ.

ಮಹಾನುಭಾವರ ನಾಮಸ್ಮರಣೆಯೂ ನಮ್ಮ ಆಯುಷ್ಯದ ಅಭಿವೃದ್ಧಿಗೆ ಸಾರ್ಥಕ ಎನ್ನುವ ಕಾರಣಕ್ಕೆ ಮಹನೀಯರ ಹೆಸರುಗಳನ್ನು ಉಲ್ಲೇಖಿಸಿದೆ.

ಕಾರಣ, ಶ್ರೀ ಶ್ರೀಪಾದರಾಜಸಂಸ್ಥಾನದ ಸತ್ಯನಿಧಿತೀರ್ಥಶ್ರೀಪಾದಂಗಳವರು ತಾವು ಹಣ್ಣು ಹಣ್ಣು ಮುದುಕರಾಗಿದ್ದರೂ, ಬೆನ್ನು ಪೂರ್ಣವಾಗಿ ಬಾಗಿ ಹೋಗಿದ್ದರೂ, ಶಿಷ್ಯರನ್ನು ಸ್ವೀಕಾರ ಮಾಡಿದ್ದರೂ ಗೋಪೀನಾಥದೇವರ, ರಂಗವಿಠ್ಠಲನ ಪೂಜೆಯನ್ನು ಭಕ್ತಿಯಿಂದ ತಾವೇ ಆಚರಿಸುತ್ತಿದ್ದರು. ಇಂತಹ ಮಹನೀಯರ ಹೆಸರು ಹೇಳುವದರಿಂದ ದೇವರ ಪೂಜೆ ಮಾಡುವ ಸೌಭಾಗ್ಯದ ಆಯುಷ್ಯವನ್ನು ದೇವರು ಕರುಣಿಸುತ್ತಾನೆ. ಅದಕ್ಕಾಗಿ ನೂರು, ನೂರಕ್ಕಿಂತ ಹೆಚ್ಚು ವರ್ಷ ಬದುಕಿದ ಸಾವಿರಾರು ಜನ ಇದ್ದರೂ, ಇವರ ಸ್ಮರಣೆ ನಮಗೆ ತಾರಕ.

ಈಗ ನಿಮ್ಮ ಪ್ರಶ್ನೆಗಳಿಗೆ ನೇರವಾಗಿ ಉತ್ತರ ವನ್ನು ಪಡೆದುಕೊಳ್ಳೋಣ.

### 1. ಅಪಮೃತ್ಯು ಎಂದರೇನು?

ಅಪಕೃಷ್ಟವಾದ ಮೃತ್ಯು, ಅಪಮೃತ್ಯು. ಇರುವಷ್ಟು ಆಯುಷ್ಯಕ್ಕಿಂತ ಮುಂಚೆಯೇ ಸಾವುಂಟಾದರೆ ಅದು ಅಪಮೃತ್ಯು ಎಂದು ಕರೆಸಿಕೊಳ್ಳುತ್ತದೆ.

### 2. ಸ್ವಾಮಿ ಜೀವಿಗೆ ಆಯುಷ್ಯವಿದ್ದೂ ಮುಂಚೆಯೇ ಅಪಮೃತ್ಯು ಕೊಡುತ್ತಾನಾ? ಜೀವಿ ಸಂಪೂರ್ಣ ಅಸ್ವತಂತ್ರನಾಗಿರುವದರಿಂದ ಆತ್ಮಹತ್ಯೆ ಅಥವಾ ಅಪಘಾತ ಇವುಗಳು ಸ್ವಾಮಿಯ ಸಂಕಲ್ಪದಂತೇ ನಡೆಯುತ್ತವೆ.

ಆಯುಷ್ಯವಿದ್ದೂ ಮುಂಚೆ ಅಪಮೃತ್ಯು ಬರುವದಿಲ್ಲ. ಇರುವ ಆಯುಷ್ಯವನ್ನು ಮನುಷ್ಯ ತನ್ನ ಅಪರಾಧಗಳಿಂದ ಕಡಿಮೆ ಮಾಡಿಕೊಂಡಿದ್ದಾಗ ಉಂಟಾಗುವ ಮೃತ್ಯುವೇ ಅಪಮೃತ್ಯು.

(ಆಯುಷ್ಯಕ್ಕಿಂತ ಮುಂಚೆ ಸಾವಾದರೆ, ಆಯುಷ್ಯವಿರುವಷ್ಟು ವರ್ಷಗಳು ಪಿಶಾಚಗಳಾಗಿ ತಿರುಗಾಡುತ್ತಾರೆ, ಎಂದು ಜನರ ಮಧ್ಯದಲ್ಲಿ ಪ್ರತೀತಿ ಉಂಟು, ತಪ್ಪು. ಆಯುಷ್ಯ ಮುಗಿಯದೇ ಸಾಯುವದಿಲ್ಲ. ಪಿಶಾಚಿಗಳಾಗುವದು ಮಹಾ ಪಾಪಕರ್ಮಗಳಿಂದ. ಪಿಶಾಚಗಳ ಕುರಿತ ವಿವರಣೆಗಾಗಿ ಈ ಉಪನ್ಯಾಸವನ್ನು ಕೇಳಿ —

VNU212, Madhwa Vijaya 12th Upanyasa)

**3. ಆಯುಷ್ಯವಿದ್ದೂ ಅಪಮೃತ್ಯು ಬರುವದೆಂದಾರೆ ಅಪಮೃತ್ಯು ಘಟಿಸಿದ ಕ್ಷಣದಿಂದ ಆಯುಷ್ಯವಿರುವತನಕ ಸ್ವಾಮಿಯು ತನ್ನ ಸಂಕಲ್ಪದಂತೆ ನಡೆಸಬೇಕೆಂದಿದ್ದ ಜೀವಿಯ ಕರ್ಮಗಳು ನಡೆಯುವದಿಲ್ಲವಲ್ಲ?**

**4. ಅಪಮೃತ್ಯು ಆಯುಷ್ಯ ಮುಗಿದಾಗ ಬರುತ್ತದೆ ಎಂದಾದರೆ ಅಪಮೃತ್ಯುವಿಗೂ ಮೃತ್ಯುವಿಗೂ ವ್ಯತ್ಯಾಸವೇನು?**

ಆಯುಷ್ಯವಿದ್ದೂ ಅಪಮೃತ್ಯು ಬರುವದಿಲ್ಲ. ಇರುವ ಆಯುಷ್ಯವನ್ನು ಪಾಪದಿಂದ ಕಳೆದುಕೊಂಡದ್ದಕ್ಕಾಗಿಯೇ ಅಪಮೃತ್ಯು ಬರುವದು.

## 5. ಅಪಮೃತ್ಯು ಪರಿಹರಿಸೋ ಅನಿಲದೇವ... ಕ್ಕೆ ಅರ್ಥವೇನು?

ಅಸಾಧಾರಣವಾದ ಸಾಧನ ಶರೀರ ಆಯುಷ್ಯವಿಲ್ಲದೇ ವ್ಯರ್ಥವಾಗದಿರಲಿ, ಇರುವ ಆಯುಷ್ಯ ವೇದವಾದೋದಿತ ಪಾದಭಜನೆಯನ್ನು ಸತತ ಮಾಡುತ್ತ ಸಾರ್ಥಕವಾಗಲಿ ಎಂದು ಆ ಪ್ರಾರ್ಥನೆಯ ಅರ್ಥ.

## 6. ಶ್ರೀ ವಾದಿರಾಜಗುರುಸಾರ್ವಭೌಮರು, ಶ್ರೀ ಬ್ರಹ್ಮಣ್ಯತೀರ್ಥರು, ಶ್ರೀ ರಾಘವೇಂದ್ರಸ್ವಾಮಿಗಳು, ಶ್ರೀ ವಿಜಯಪ್ರಭುಗಳು ಮುಂತಾದ ಮಹನೀಯರು ಪರಿಹಾರ ಮಾಡಿದ ಈ ಅಪಮೃತ್ಯುವಿನ ರಹಸ್ಯವೇನು?

ಪಾಪದಿಂದ ಆಯುಷ್ಯ ಕಳೆದುಕೊಂಡಿದ್ದವರಿಗೆ ತಮ್ಮ ತಪಸ್ಸಿನ ಸಾಮರ್ಥ್ಯದಿಂದ ಮತ್ತೆ

ಆಯುಷ್ಯವನ್ನು ಧಾರೆಯೆರೆದ ಮಹಾನುಭಾವರು ಅವರು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name VISHWANANDINI**
- **Account Number 35368588017**
- **Account Type Current Account**
- **Bank State Bank of India**
- **Branch T. Narasipura, Mysore**
- **NEW IFSC SBIN0040076**

Please WhatsApp the transaction details to **9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**
No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491